www.ecourtsindia.com

# ಓಎಸ್ : 298/2012

ದಿ. 25-2-2019 ಡಿಡಬ್ಲ್ಯು -1

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು : ಶ್ರೀ ಎಚ್‌ಎಂಎಸ್‌ಎನ್ ವಕೀಲರಿಂದ**

ದಿನಾಂಕ ೧೫-೪-೧೯೪೭ ರಲ್ಲಿ ನನ್ನ ತಾತ ಸಯ್ಯದ ಮೊಹಮ್ಮದ ಹಯಾತ್ ರವರಿಂದ ಆಸ್ತಿ ನಂ. ೧೦೮೭ ರ ಸಂಪೂರ್ಣ ಆಸ್ತಿಯನ್ನು ನೋಂದಣಿ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ೧೯೮೩ ರ ವಿಭಾಗದ ವೇಳೆ ಶೆಡ್ಯುಲ್‌ಗಳಲ್ಲಿ ನಮೂದಿಸಿದ ವಿವರದಂತೆ ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಪಾಲಿಗೆ ಬಂದ ಆಸ್ತಿಗಳನ್ನು ದಾವಾ ಕಚ್ಚಾ ನಕಾಶೆಯಲ್ಲಿ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಕಚ್ಚಾ ನಕಾಶೆ ನಮ್ಮ ಆಸ್ತಿಗಳಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನಾನು ಎಂ.ಆರ್. ತಾರಾಂಬ ಅವರಿಂದ ದಿ. ૮-೮-೨೦೦೯ ರಲ್ಲಿ ನಿಡಿ-೪ ಕ್ರಯಪತ್ರ ಪ್ರಕಾರ ಕ್ರಯ ಖರೀದಿ ಮಾಡಿದ್ದೇನೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ೨೯ ವರ್ಷಗಳ ಹಿಂದೆಯೇ ಲೈಸನ್ಸ್ ಪಡೆದು ೫೦೦ ಚದುರ ಅಡಿ ಆರ್‌ಸಿಸಿ ನೆಲ ಅಂತಸ್ಥಿನ ಮನೆಯನ್ನು ಕಟ್ಟಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಡಿ-೪ ರ ಶೆಡ್ಯುಲ್‌ನಲ್ಲಿ ನಮೂದಿಸಿದ ಆರ್‌ಸಿಸಿ ಮನೆ ಮತ್ತು ಜಾಗ ಸೇರಿರುವ ಎರೆಡು ಸ್ವತ್ತುಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿ. ವಿಭಾಗ ಪತ್ರದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ವಿಶ್ವನಾಥರಾವರ ಪಾಲಿಗೆ ಬಂದ ಆಸ್ತಿಗಳ ಹಿಂಬದಿಯ ರಾಮರಾವ ಮತ್ತು ಜಯರಾಮರಾವರ ಪಾಲಿಗೆ ಬಂದ ಹಳೆಯ ಮನೆಗಳ ಖಾಲಿ ಜಾಗವನ್ನು ನಿಡಿ-೪ ರ ಕ್ರಯಪತ್ರದಲ್ಲಿ ಖರೀದಿಸಿದ್ದೇನೆ ಎಂದರೆ ಸರಿ. ನಾನು ನಿಡಿ-೪ ರ ಕ್ರಯಪತ್ರದಲ್ಲಿ ತಾರಾಂಬರವರಿಂದ ಖರೀದಿ ಮಾಡಿದ ಮನೆಯು ನಮ್ಮ ಮನೆಯ ಪೂರ್ವ ದಿಕ್ಕಿಗೆ ಮತ್ತು ಅದೇ ಕ್ರಯಪತ್ರದಲ್ಲಿ ಖರೀದಿಸಲಾದ ಜಾಗವು ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಇದೆ ಎಂದರೆ ಸರಿ. ಸದರಿ ಮನೆ ಮತ್ತು ಜಾಗವು ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಿಡಿ-೪ ರ ಶೆಡ್ಯುಲ್‌ನಲ್ಲಿ ಖಾತಾ ನಂ. ૩૮೯, ಅಸೆಸಮೆಂಟ್ ನಂ. ೧೭೫೬/೧೧೬೬ಬಿ ಆರ್‌ಸಿಸಿ ಮನೆ ೫೦೦ ಚದುರ ಅಡಿ ಮತ್ತು ಅದಕ್ಕೆ ಹೊಂದಿರುವ ಉಳಿದ ૩೫೦ ಚದುರ ಅಡಿಗಳ ಜಾಗ ಹಾಗೂ ಇನ್ನೊಂದು ಖಾತಾ ನಂ. ૩೮೦ ಅಸೆಸಮೆಂಟ್ ನಂ. ೧೭೫೬/೧೧೬೬ಎಫ್ ರಲ್ಲಿರುವ ಹಳೆಯ ಮನೆಯ ನಿವೇಶನದ ೪೫೯.೪೮ ರ ಚದುರ ಅಡಿಗಳ ಜಾಗವನ್ನು ಖರೀದಿಸಿದ್ದೇನೆ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KACD030007472012/truecopy/order-14.pdf

ನಿಡಿ-೪ ರಲ್ಲಿರುವ ಚೆಕ್ಕುಬಂದಿಯನ್ನು ತಾರಾಂಬರವರು ಬರೆಯಿಸಿರುತ್ತಾರೆ. ಅದನ್ನು ಬರೆಸುವ ಸಮಯ ನಾನು ಇರಲಿಲ್ಲ. ಸದರಿ ಪತ್ರಕ್ಕೆ ನಾನು ಸಹಿಯನ್ನು ಹಾಕಿರುತ್ತೇನೆ. ನಾನು ಖರೀದಿ ಮಾಡಿದ ಆರ್‌ಸಿಸಿ ಮನೆ ಜಾಗ ಹಾಗೂ ಹಳೆಯ ಮನೆಯ ನಿವೇಶನ ಬೇರೆ ಬೇರೆ ಸ್ಥಳದಲ್ಲಿ ಇದ್ದರೂ ಸಹ ಒಂದೇ ಚಕ್ಕುಬಂದಿಯನ್ನು ನಿಡಿ-೪ ರಲ್ಲಿ ನಮೂದಿಸಿ ನನ್ನ ಬಲಾಢ್ಯತನವನ್ನು ತೋರಿಸಿದ್ದೇನೆ ಎಂದರೆ ಸಾಕ್ಷಿಯು ಒಂದೇ ಚೆಕ್ಕುಬಂದಿಯನ್ನು ತೋರಿಸಲಾಗಿದೆ, ಆದರೆ ನನ್ನ ಬಲಾಢ್ಯತನ ತೋರಿಸಿಲ್ಲ ಎನ್ನುತ್ತಾರೆ. ನಿಡಿ-೪ ರ ಕ್ರಯಪತ್ರದ ಆಧಾರದಲ್ಲಿ ನನ್ನ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ನಿಡಿ-೪ ರಲ್ಲಿ ಖರೀದಿಸಲಾದ ಚೆಕ್ಕುಬಂದಿಯನ್ನು ತಾರಾಂಬರವರು ಬರೆಯಿಸಿರುವ ಬಗ್ಗೆ ಮತ್ತು ಅದರ ಸತ್ಯಾಸತ್ಯತೆಯನ್ನು ಅರಿಯುವ ಬಗ್ಗೆ ನಾನು ಪ್ರಯತ್ನ ಮಾಡಲಿಲ್ಲ. ತಾರಾಂಬರವರು ಬೆಂಗಳೂರಿನಲ್ಲಿ ವಾಸವಾಗಿದ್ದು ನಾನೇ ನಿಡಿ ಕ್ರಯಪತ್ರವನ್ನು ಬರೆಯಿಸಿ ತಯಾರಿಸಿದ್ದು, ತಾರಾಂಬರವರು ಸದರಿ ಪತ್ರಕ್ಕೆ ಸಹಿ ಹಾಕಿ ದುಡ್ಡು ಪಡೆದುಕೊಂಡು ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿದ್ದರು ಎಂದರೆ ಸುಳ್ಳು. ನಾನು ನಗರಸಭೆಯಲ್ಲಿ ಖಾತೆ ಬದಲಾವಣೆ ಮಾಡುವ ಸಮಯ ನನ್ನ ಬಲಾಢ್ಯತನವನ್ನು ಉಪಯೋಗಿಸಿ ನಿಡಿ-೪ ರ ಶೆಡ್ಯುಲ್‌ನಲ್ಲಿ ನಮೂದಿಸಿದ ಆಸ್ತಿಗಳಿಗೆ ಒಂದೇ ಚೆಕ್ಕುಬಂದಿಯನ್ನು ನಮೂದಿಸಿ ಖಾತೆ ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ನಿಡಿ-೪ ರ ಆಸ್ತಿಗಳಿಗೆ ತಪ್ಪು ಚೆಕ್ಕುಬಂದಿ ನಮೂದಿಸಿರುವ ಬಗ್ಗೆ ನನ್ನ ವಕೀಲರ ಮುಖಾಂತರ ಯಾವುದೇ ನೋಟೀಸನ್ನು ಕಳುಹಿಸಿರುವುದಿಲ್ಲ.

ನಿಪಿ-೧೧ ರ ಅರ್ಜಿ ಪ್ರಕಾರ ವಾದಿಯು ನಾನು ನಿಡಿ-೪ ರಲ್ಲಿ ತಪ್ಪು ಚೆಕ್ಕುಬಂದಿಯನ್ನು ನಮೂದಿಸಿ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ಉಪನೋಂದಣಿ ಕಚೇರಿಗೆ ತಕರಾರು ಸಲ್ಲಿಸಿರುವ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-೪ ರ ನಗರಸಭೆ ದಾಖಲಾತಿಗಳಲ್ಲಿ ನನ್ನ ತಾತ ಖರೀದಿ ಮಾಡಿದ ಕೈಸಾಲೆ (ವರಾಂಡ)ವು ೬.೪೫ * ೩೩ ಅಡಿಗಳು ವಿಸ್ತೀರ್ಣ ಹೊಂದಿದೆ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-೪ ರಲ್ಲಿ ಪೂರ್ವದ ಅಂಗಳ ಕ್ರಮ ಸಂಖ್ಯೆ ೨೩೪ ರಲ್ಲಿ ಪೂರ್ವದ ಅಂಗಳ ೭೨ * ೨೬.೪೫ ಮತ್ತು ಬಿ - ೨೦ * ೧೩ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-೪ ರ ಕ್ರಮ ಸಂಖ್ಯೆ ೨೩೪ ರ ಆಸ್ತಿಯ ಕಾಲಂ ನಂ. ೧೧ ರಲ್ಲಿ ಹಿಂಭಾಗದವರು ಓಡಾಡಲು ಅನುಕೂಲವಾಗಿ ಮಧ್ಯದ ಅಂಗಳದಲ್ಲಿ ಪಶ್ಚಿಮಕ್ಕೆ ಓಣಿಯ ಕಡೆಗೆ ಬಾಗಿಲು ಇದೆ ಎಂದು ನಮೂದಿಸಲಾಗಿದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ದಾಖಲೆಯು ಖೊಟ್ಟಿ ಎನ್ನುತ್ತಾರೆ. ನಿಡಿ-೬, ನಿಡಿ-೭, ನಿಡಿ-೧೦, ನಿಡಿ-

This is a True Copy of the Court Records Online. Authenticated @ districts.ecourtsindia.com/cnr/KACD030007472012/truecopy/order-14.pdf

www.ecourtsindia.com

೧೧, ನಿಡಿ-೧೫, ನಿಡಿ-೨೫, ನಿಡಿ-೨೬ ದಾಖಲೆಗಳಿಗೂ ಈ ದಾವಾ ವಿಷಯಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಚಿತ್ರದುರ್ಗ

This is a True Copy of the Court Records Online. Authenticated @ districts.ecourtsindia.com/cnr/KACD030007472012/truecopy/order-14.pdf

www.ecourtsindia.com